ಇ) ಸದರಿ ಕಾರ್ಖಾನೆಯು ಇನ್ನೂ ನಿರ್ಮಾಣ ಹಂತದಲ್ಲಿದ್ದು, ಕಾರ್ಖಾನೆಗೆ ಬೇಕಾಗುವ ಸಿಬ್ಬಂದಿ ವರ್ಗವನ್ನು ಇನ್ನೂ ಆಯ್ಕೆ ಮಾಡಬೇಕಾಗಿದೆ. ಕಾರ್ಖಾನೆಯು ಉದ್ಯೋಗ ನೀಡುವಲ್ಲಿ ಸ್ಥಳೀಯರಿಗೆ ಆದ್ಯತೆ ನೀಡಬೇಕಾಗುತ್ತದೆ.

ಅಲೆಮಾರಿ ಜನಾಂಗದವರ ಅಭಿವೃದ್ಧಿಗಾಗಿ ಆಯವ್ಯಯದಲ್ಲಿ ಹಣ ನಿಗದಿಗೊಳಿಸುವ ಬಗ್ಗೆ.

1849ಎ - ಶ್ರೀ ಬಿ.ಹೆಚ್. ಬನ್ನಿಕೋಡ್ (ಹಿರೇಕೆರೂರು) : ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) *1991-92ನೇ ಸಾಲಿನ ಇಲಾಖೆಯ ಆಯವ್ಯಯದಲ್ಲಿ ಅಲೆಮಾರಿ ಜನಾಂಗದವರಿಗಾಗಿ ಯೋಜನೆ ಜಾರಿಗೊಳಿಸಲು ಹಣ ನಿಗದಿ ಮಾಡಲಾಗಿದೆಯೇ ಹಾಗಿದ್ದಲ್ಲಿ ಹಣದ ಮೊತ್ತವೆಷ್ಟು? ಇಲ್ಲದಿದ್ದಲ್ಲಿ ಇಲಾಖೆಯ ಒಟ್ಟಾರೆ ಖರ್ಚಿನಲ್ಲಿ ಉಳಿತಾಯ ಮಾಡಿ ಜಾರಿಗೊಳಿಸಲು ಯೋಜನೆ ಹಾಕಿಕೊಳ್ಳಲಾಗಿದೆಯೇ?*

ಆ) *ಕೇಂದ್ರ ಸರ್ಕಾರ ಸದರಿ ಜನಾಂಗದವರಿಗಾಗಿ ನೀಡಲಾಗುವ ಆರ್ಥಿಕ ಸಹಾಯವನ್ನು ಉಪಯೋಗಿಸಿಕೊಳ್ಳಲು ಸರ್ಕಾರ ಕೈಗೊಂಡಿರುವ ಕ್ರಮಗಳಾವ್ಯಾವು? ಇಲ್ಲದಿದ್ದಲ್ಲಿ ಯಾವುದೇ ಕ್ರಮ ಕೈಗೊಳ್ಳದೆ ಸದರಿ ಜನಾಂಗದವರಿಗೆ ಸಂವಿಧಾನದ ಹಕ್ಕಿನಿಂದ ವಂಚಿಸಲಾಗಿದೆಯೇ?*

ಇ) *ಜವಹಾರ್ ರೋಜಗಾರ್ ಯೋಜನೆಯಡಿಯಲ್ಲಿ ಸದರಿ ಜನಾಂಗದವರಿಗೆ ಕೈಗೊಂಡಿರುವ ವಿಶೇಷ ಕಾರ್ಯಕ್ರಮಗಳಾವ್ಯಾವು?*

ಶ್ರೀ ಬಿ. ಶಿವಣ್ಣ (ಸಮಾಜ ಕಲ್ಯಾಣ ಸಚಿವರು)

ಅ) ಇಲ್ಲ. ಆದರೆ ಇವರುಗಳನ್ನು 'ಎ' ಗುಂಪಿನಡಿಯಲ್ಲಿ ಸೇರಿಸಿದ್ದು 'ಎ' ಗುಂಪಿನವರಿಗೆ ಆಯವ್ಯಯದಲ್ಲಿ 151.79 ಲಕ್ಷ ರೂ.ಗಳನ್ನು ಒದಗಿಸಲಾಗಿದೆ.

ಆ) ಈ ಯೋಜನಾ ಕಾರ್ಯಕ್ರಮಗಳನ್ನು ಕೇಂದ್ರ ಸರ್ಕಾರವು ಇನ್ನೂ ರೂಪಿಸಬೇಕಾಗಿರುವುದರಿಂದ ಹಣದ ಉಪಯೋಗದ ಪ್ರಶ್ನೆ ಸದ್ಯಕ್ಕೆ ಉದ್ಭವಿಸುವುದಿಲ್ಲ.

ಇ) ಯಾವುದು ಇಲ್ಲ.

ರೇಷ್ಮೆ ಅಭಿವೃದ್ಧಿ ಯೋಜನೆ

1849 - ಶ್ರೀ ಬಿ.ಹೆಚ್. ಬನ್ನಿಕೋಡ್ (ಹಿರೇಕೆರೂರು) : ಮಾನ್ಯ ರೇಷ್ಮೆ ಕೃಷಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಅಲೆಮಾರಿ ಜನಾಂಗದವರಿಗೆ ವಿಶೇಷ ಸಮಗ್ರ ರೇಷ್ಮೆ ಅಭಿವೃದ್ಧಿ ಯೋಜನೆಯನ್ನು ಜಾರಿಗೊಳಿಸಲಾಗುತ್ತಿದೆಯೇ? ಇಲ್ಲದಿದ್ದಲ್ಲಿ ಜಾರಿಗೊಳಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು?*

ಆ) *ರಾಜ್ಯದಲ್ಲಿರುವ ಈ ಜನಾಂಗದವರನ್ನು ಗುರುತಿಸಿರುವ ಗ್ರಾಮ ತಾಲ್ಲೂಕು ಜಿಲ್ಲಾವಾರು ಮಾಹಿತಿಯನ್ನು ಒದಗಿಸುವುದು, ಈ ಪೈಕಿ ಸಣ್ಣ ಮತ್ತು ಅತಿ ಸಣ್ಣ ಹಾಗೂ ಕೃಷಿ ಕಾರ್ಮಿಕರ ಕುಟುಂಬಗಳೆಷ್ಟು?*

ಇ) *ಈ ಜನಾಂಗದವರ ಗ್ರಾಮಗಳನ್ನು ಸದರಿ ಯೋಜನೆ ಜಾರಿಗೊಳಿಸಲು ಘೋಷಿಸಲಾಗಿದೆಯೇ? ಇಲ್ಲದಿದ್ದಲ್ಲಿ ಸರ್ಕಾರದ ಕ್ರಮಗಳಾವ್ಯಾವು?*

ಈ) *ರಾಜ್ಯದಲ್ಲಿ ಒಟ್ಟು ಅಲೆಮಾರಿ ಜನಾಂಗದವರು ರೇಷ್ಮೆ ಉದ್ಯಮದಲ್ಲಿ ತೊಡಗಿಸುವವರನ್ನು ಗುರುತಿಸಲಾಗಿದೆಯೇ? ಹಾಗಿದ್ದಲ್ಲಿ ಯಾವ ಗ್ರಾಮದಲ್ಲಿ ಎಷ್ಟು ಕುಟುಂಬಗಳಿರುವ್ಯಾವು ವಿವರ ನೀಡುವುದು?*

ಶ್ರೀ ವಿ. ಮುನಿಯಪ್ಪ (ರೇಷ್ಮೆ ಕೃಷಿ ರಾಜ್ಯ ಸಚಿವರು) :